ಪ್ರತಿನಿಧಿ
ಪ್ರಾದೇಶಿಕ ದಿನಪತ್ರಿಕೆ



# ಬದುಕಿನಲ್ಲಿ ನಮ್ಮ ಸಾಧನೆಗಳೇ ಶಾಶ್ವತ

**ಪ್ರತಿನಿಧಿ ವರದಿ** ಮೈಸೂರು

ಮನುಷ್ಯನ ಹುಟ್ಟು ಅನಿಶ್ಚಿತ, ಸಾವು ನಿಶ್ಚಿತವಾಗಿದ್ದು, ಹುಟ್ಟು ಸಾವುಗಳ ಅಂತರದಲ್ಲಿ ಮನುಷ್ಯ ಮಾಡುವ ಸಾಧನೆಗಳೇ ಶಾಶ್ವತ ಎಂದು ಏಷಿಯನ್ ಥ್ರೋಬಾಲ್ ಫೆಡೆರೇಷನ್ ತೀರ್ಪುಗಾರ ಹಾಗೂ ವಿಶ್ರಾಂತ ದೈಹಿಕ ಶಿಕ್ಷಣ ನಿರ್ದೇಶಕ ಎನ್.ಎಸ್.ಸುಬ್ರಮಣ್ಯ ಹೇಳಿದರು.


ಪ್ರತಿನಿಧಿ ಫೋಟೋ

ನಗರದ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನಲ್ಲಿ ವಿಟಿಯು ಮೈಸೂರು ವಲಯ ಅಂತರ ಕಾಲೇಜು ಮಹಿಳಾ ಥ್ರೋಬಾಲ್ ಮತ್ತು ಪುರುಷರ ಹಗ್ಗ- ಜಗ್ಗಾಟ ಚಾಂಪಿಯನ್‌ಶಿಪ್-2024 ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಕ್ರೀಡಾ ಸ್ಪರ್ಧೆಗಳಲ್ಲಿ ಎಲ್ಲರೂ ಗೆಲ್ಲಲು ಸಾಧ್ಯ ವಿಲ್ಲ, ಗೆದ್ದವರು ಹರ್ಷಪಟ್ಟರೆ, ಸೋತವರು ನಿರಾಶರಾಗದೆ ಅದನ್ನು ಅನುಭವವೆಂದು ಪರಿಗಣಿಸಿ ಸೋಲಿನ ಕಾರಣಗಳ ಪರಾಮರ್ಶಿಸಿ ಮುಂದಿನ ಗೆಲುವಿಗಾಗಿ ಪ್ರಯತ್ನಿಸಬೇಕು ಎಂದರು.

> ▸ ವಿಶ್ರಾಂತ ದೈಹಿಕ ಶಿಕ್ಷಣ ನಿರ್ದೇಶಕ ಎನ್.ಎಸ್. ಸುಬ್ರಮಣ್ಯ ಹೇಳಿಕೆ

ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಮತ್ತು ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನ ಸಹಯೋಗದಲ್ಲಿ ಆಯೋಜಿಸಿದ್ದ ಪಂದ್ಯಾವಳಿಯಲ್ಲಿ ಮೈಸೂರು ವಲಯದ ವಿವಿಧ ಕಾಲೇಜುಗಳಿಂದ ಥ್ರೋಬಾಲ್‌ನಲ್ಲಿ 13 ತಂಡಗಳು ಮತ್ತು ಹಗ್ಗ-ಜಗ್ಗಾಟದಲ್ಲಿ 8 ತಂಡಗಳು ಭಾಗವಹಿಸಿದ್ದವು. ಥ್ರೋಬಾಲ್ ಸ್ಪರ್ಧೆಯಲ್ಲಿ ಮೈಸೂರಿನ ಜೆಎಸ್‌ಎಸ್‌ಎಸ್ ಮಹಿಳಾ ಇಂಜಿನಿಯರಿಂಗ್ ಕಾಲೇಜು ತಂಡ ಪ್ರಶಸ್ತಿ ಗೆದ್ದು ಬೀಗಿದರೆ. ಎಟಿಎಂಇ ಮಹಿಳಾ ತಂಡ ರನ್ನರ್ ಅಪ್ ಸ್ಥಾನ ಪಡೆಯಿತು. ಪುರುಷರ ಹಗ್ಗ- ಜಗ್ಗಾಟದಲ್ಲಿ ವಿವಿಸಿಇ ಪುರುಷರ ತಂಡ ಚಾಂಪಿಯನ್ ಪಟ್ಟಕ್ಕೇರಿದರೆ, ಎನ್‌ಐಇ ತಂಡ 2ನೇ ಸ್ಥಾನ ಪಡೆಯಿತು.

ಸಮಾರಂಭದಲ್ಲಿ ಎಟಿಎಂಇ ಪ್ರಾಂಶುಪಾಲ ಡಾ.ಎಲ್. ಬಸವರಾಜ್, ವಿಟಿಯು ಸಾಂಸ್ಕೃತಿಕ ಮತ್ತು ಕ್ರೀಡಾ ವಿಭಾಗದ ಸುಧಿನಾ, ಡೀನ್ ಡಾ.ಕೆ.ಶ್ರೀನಿವಾಸ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಪಿ.ಮುರಳೀಧರ್, ಸಿಬ್ಬಂದಿ ಹೇಮಂತ್, ರೋಹಿತ್, ಜಸ್ಲೀನ್, ಸಿ.ಚಂದ್ರಶೇಖರ್, ಎ.ಪಿ.ನಮಿತಾ, ಶ್ರೀಕಂಠಮೂರ್ತಿ, ಕುಶಾಲ್ ರವಿ ಇತರರಿದ್ದರು.